# ಗುಲಬರ್ಗಾ ವಿಶ್ವವಿದ್ಯಾಲಯ

ಜ್ಞಾನ ಗಂಗಾ, ಕಲಬುರಗಿ-585 106, ಕರ್ನಾಟಕ

ದೂರವಾಣಿ ಸಂ.: 08472-263202 ಫ್ಯಾಕ್ಸ್: 08472-263206, ಇ-ಮೇಲ್: **registrargug@rediffmail.com**


ಕ್ರ.ಸಂ. ಗುವಿಕ/ವಿಮವಿ/ಯುಜಿ/ಪ್ರ.ಶಾ./2025-26/425 ದಿನಾಂಕ: 23.09.2025.

## ಪರಿಷ್ಕೃತ-V

## UUCMS ನೋಡಲ್ ಅಧಿಕಾರಿಗಳಿಗೆ ಟಿಪ್ಪಣಿ:

ವಿಷಯ: 2025-26ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ ಕೋರ್ಸುಗಳ ಪ್ರವೇಶಾತಿಯ ಶೈಕ್ಷಣಿಕ ವೇಳಾಪಟ್ಟಿಯ ಕುರಿತು.

ಉಲ್ಲೇಖ:
1. ಸರಕಾರದ ಆದೇಶ ಸಂಖ್ಯೆ: ಇಡಿ/212/ಯುಎನ್ಇ/2024, ಬೆಂಗಳೂರು, ದಿನಾಂಕ: 04.10.2024.
2. ಸುತ್ತೋಲೆ ಸಂಖ್ಯೆ: ಗುವಿಕ/ವಿಮವಿ/ಯುಜಿ/2025-26/10, ದಿನಾಂಕ: 05.04.2025.
3. ಸುತ್ತೋಲೆ ಸಂಖ್ಯೆ: ಗುವಿಕ/ವಿಮವಿ/ಯುಜಿ/ಪ್ರ.ಶಾ/2025-26/35, ದಿ: 11.05.2025.
4. ಸುತ್ತೋಲೆ ಸಂಖ್ಯೆ: ಗುವಿಕ/ವಿಮವಿ/ಯುಜಿ/ಪ್ರ.ಶಾ/2025-26/232, ದಿ: 28.05.2025.
5. ಸುತ್ತೋಲೆ ಸಂಖ್ಯೆ: ಗುವಿಕ/ವಿಮವಿ/ಯುಜಿ/ಪ್ರ.ಶಾ/2025-26/279, ದಿ: 25.06.2025.
6. ಸರಕಾರದ ಆದೇಶ ಸಂಖ್ಯೆ: ಇಡಿ/216/ಯುಎನ್ಇ/2025, ಬೆಂಗಳೂರು, ದಿ: 30.06.2025.
7. ಸರಕಾರದ ಸುತ್ತೋಲೆ ಸಂಖ್ಯೆ: ಇಡಿ/216/ಯುಎನ್ಇ/2025, ಬೆಂಗಳೂರು, ದಿ: 03.09.2025.
8. ಸುತ್ತೋಲೆ ಸಂಖ್ಯೆ: ಗುವಿಕ/ವಿಮವಿ/ಯುಜಿ/ಪ್ರ.ಶಾ/2025-26/411, ದಿ: 08.09.2025.
9. ಮಾನ್ಯ ಕುಲಪತಿಗಳ ಅನುಮೋದನೆ ದಿನಾಂಕ: 23.09.2025

*****

ಮೇಲಿನ ವಿಷಯ ಹಾಗೂ ಉಲ್ಲೇಖಗಳಿಗೆ ಸಂಬಂಧಿಸಿದಂತೆ, ಗುಲಬರ್ಗಾ ವಿಶ್ವವಿದ್ಯಾಲಯದ ಅಧೀನಕ್ಕೆ ಒಳಪಟ್ಟ ಪದವಿ ಮಹಾವಿದ್ಯಾಲಯಗಳಿಗೆ 2025-26ನೇ ಶೈಕ್ಷಣಿಕ ಸಾಲಿನ ವಿವಿಧ ಸ್ನಾತಕ ಕೋರ್ಸುಗಳ ಪ್ರವೇಶಾತಿಗಳನ್ನು ನೀಡಲು ಪ್ರವೇಶಾತಿ ಶೈಕ್ಷಣಿಕ ವೇಳಾಪಟ್ಟಿಯನ್ನು ಸರಕಾರದ ಆದೇಶ ಸಂಖ್ಯೆ:ಇಡಿ/212/ಯುಎನ್ಇ/2025, ಬೆಂಗಳೂರು, ದಿನಾಂಕ:03.06.2025ರ ಪ್ರಕಾರ ಪೂರ್ವ ಅನ್ವಯ ಆಗುವಂತೆ ದಿನಾಂಕ 30.08.2025ರವರೆಗೆ ಪ್ರವೇಶಾತಿಯು ದಂಡರಹಿತ ಕೊನೆಯ ದಿನವಾಗಿ ನೀಡಲಾಗಿದ್ದು ಪ್ರಸ್ತುತ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳ ಪೈಕಿ ಶೇ. 10 ರಿಂದ 15ರಷ್ಟು ಐ.ಟಿ.ಐ ಹಾಗೂ ದ್ವಿತೀಯ ಪಿ.ಯು.ಸಿ ಮತ್ತು ಡಿಪ್ಲೋಮ್ ಕೋರ್ಸಿನ ವಿದ್ಯಾರ್ಥಿಗಳಾಗಿದ್ದು. ಈ ಕೋರ್ಸನ ಪರೀಕ್ಷಾ ಫಲಿತಾಂಶವು ವಿಳಂಬವಾಗಿ ಪ್ರಕಟವಾಗಿರುವುದರಿಂದ. ಈ ಹಿನ್ನಲೆಯಲ್ಲಿ ವಿವಿಧ ಪದವಿ ಕೋರ್ಸುಗಳ ಪ್ರವೇಶಾತಿ ಪಡೆಯುವ ವಿದ್ಯಾರ್ಥಿಗಳಿಗೆ ಪ್ರವೇಶಾತಿಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಪದವಿ ಕೋರ್ಸುಗಳ ಪ್ರವೇಶಾತಿ ಸಂಬಂಧ ದಂಡ ಶುಲ್ಕ ರಹಿತವಾಗಿ ಪ್ರವೇಶಾತಿ ಪಡೆಯಲು ಅನುಕೂಲವಾಗಲು ಉನ್ನತ ಶಿಕ್ಷಣ ಇಲಾಖೆಯಡಿ ಬರುವ ಎಲ್ಲಾ ವಿಶ್ವವಿದ್ಯಾಲಯಗಳು/ಕಾಲೇಜು ಶಿಕ್ಷಣ/ಅನುದಾನ/ ಅನುದಾನ ರಹಿತ/ಕಾಲೇಜುಗಳಿಗೆ (ತಾಂತ್ರಿಕ ಶಿಕ್ಷಣವನ್ನು ಹೊರತುಪಡಿಸಿ) ಅನ್ವಯಿಸುವಂತೆ ದಿನಾಂಕ: 15.09.2025ರವರೆಗೆ ದಂಡ ಶುಲ್ಕರಹಿತವಾಗಿ ಪ್ರವೇಶಾತಿ ದಿನಾಂಕವನ್ನು ವಿಸ್ತರಿಸಲಾಗಿತ್ತು.

ಮುಂದುವರೆಯುತ್ತ, ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಿವಿಧ ಮಹಾವಿದ್ಯಾಲಯಗಳು ಪ್ರಥಮ ಸೆಮಿಸ್ಟರ್‌ಗೆ ಪ್ರವೇಶಾತಿಯನ್ನು ಮಾಡಲು ಮನವಿ ಮಾಡಿರುವುದರಿಂದ ದಂಡಸಹಿತ ದಿನಾಂಕ: 24.09.2025 ರಿಂದ 30.09.2025 ರವರೆಗೆ ರೂ. 1500/- ದಂಡಸಹಿತವೆಂದು ಆನ್‌ಲೈನ್ ಮೂಲಕ ಪ್ರವೇಶಾತಿ ನೀಡುವ ಅವಕಾಶವನ್ನು UUCMS ನಲ್ಲಿ ಕಲ್ಪಿಸಿಕೊಡಲು ಸೂಚಿಸಲಾಗಿದೆ. ಕೊನೆಯ ದಿನಾಂಕದ ನಂತರ ಪ್ರವೇಶ ಪಡೆದ ವಿದ್ಯಾರ್ಥಿಗಳ ಪಟ್ಟಿ ಮತ್ತು ಮೂಲ ದಾಖಲಾತಿಗಳನ್ನು ದಿನಾಂಕ: 03.10.2025 ರಂದು ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ, ಮುಂದುವರೆದು ನಿಗದಿತ ದಿನಾಂಕದ ನಂತರ ಬಂದಂತಹ ಪ್ರವೇಶ ಪಡೆದ ವಿದ್ಯಾರ್ಥಿಗಳ ಪಟ್ಟಿ ಮತ್ತು ಮೂಲ ದಾಖಲಾತಿಗಳನ್ನು ಸಲ್ಲಿಸಿದಲ್ಲಿ ಸಂಬಂಧಪಟ್ಟ ಕಾಲೇಜಿನ ಪ್ರಾಂಶುಪಾಲರಿಂದ ಪ್ರತಿ ದಿನ ರೂ. 1000/- ದಂಡವಿಧಿಸಲಾಗುವುದು.

23/9/25

ಕುಲಸಚಿವರು

ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ

General letters-1

24-9-25

ಗೆ,

ಎಲ್ಲಾ ಪದವಿ ಮಹಾವಿದ್ಯಾಲಯಗಳ ಪ್ರಾಂಶುಪಾಲರಿಗೆ,

ಪ್ರತಿಗಳು:

1. ಮುಖ್ಯಸ್ಥರು, ಗಣಕ ಕೇಂದ್ರ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಈ ವಿಷಯವನ್ನು ವಿಶ್ವವಿದ್ಯಾಲಯದ ಜಾಲತಾಣದಲ್ಲಿ ಪ್ರಕಟಿಸಲು ಕೋರಿದೆ.
2. ಕುಲಸಚಿವರು (ಮೌಲ್ಯಮಾಪನ), ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಇವರ ಮಾಹಿತಿಗಾಗಿ.
3. ವಿಶೇಷಾಧಿಕಾರಿಗಳು, ವಿದ್ಯಾಮಂಡಲ ವಿಭಾಗ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ ಇವರ ಮಾಹಿತಿಗಾಗಿ.
4. ಕುಲಪತಿಗಳ ಆಪ್ತ ಕಾರ್ಯದರ್ಶಿ/ಕುಲಸಚಿವರ ಆಪ್ತ ಸಹಾಯಕ, ಗುಲಬರ್ಗಾ ವಿಶ್ವವಿದ್ಯಾಲಯ, ಕಲಬುರಗಿ.